ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ

949 (975) ಶ್ರೀ ವೀರಭದ್ರಪ್ಪ ಹಾಲ ಹರವಿ (ಹುಬ್ಬಳ್ಳಿ ಧಾರವಾಡ ಪೂರ್ವ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಶಿವಾಜಿನಗರ ಬಸ್ ಟರ್ಮಿನಲ್ ಮಾದರಿಯಲ್ಲಿ ಹುಬ್ಬಳ್ಳಿ ನಗರದ ಸಿ.ಬಿ.ಟಿ.ಯಲ್ಲಿ ಬಸ್ ನಿಲ್ದಾಣ ನಿರ್ಮಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಇದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು?

ಇ) ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) ಬೆಂಗಳೂರು ಶಿವಾಜಿನಗರ ಬಸ್ ಟರ್ಮಿನಲ್ ಮಾದರಿಯಲ್ಲಿ ಹುಬ್ಬಳ್ಳಿ ನಗರದ ಸಿ.ಬಿ.ಟಿ.ಯಲ್ಲಿ ಬಸ್ ನಿಲ್ದಾಣವನ್ನು ಖಾಸಗಿ ಸಹಭಾಗಿತ್ವ ದಡಿಯಲ್ಲಿ ನಿರ್ಮಿಸುವ ವಿಚಾರ ಸರ್ಕಾರದ ಮುಂದೆ ಇರುತ್ತದೆ.

ಆ) ಮತ್ತು ಇ) ಸದರಿ ಬಸ್ ನಿಲ್ದಾಣವನ್ನು ಖಾಸಗಿ ಸಹಭಾಗಿತ್ವ ದಡಿಯಲ್ಲಿ ಕೈಗೊಳ್ಳುವ ಸಲುವಾಗಿ ಯೋಜನಾ ರೂಪುರೇಷೆಗಳನ್ನು ತಯಾರಿಸಲು ಕೆಎಸ್ಐಐಡಿಸಿರವರಿಗೆ ವಹಿಸಿಕೊಡಲಾಗಿದೆ. ಕರ್ನಾಟಕ ಮೂಲಭೂತ ಸೌಕರ್ಯ ಇಲಾಖೆಯ ಏಕಗವಾಕ್ಷಿ ಏಜೆನ್ಸಿ ಮೂಲಕ ಮಂಜೂರಾತಿ ಪಡೆದು ಯೋಜನೆಯನ್ನು ಶೀಘ್ರವಾಗಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುವುದು.

ಸಂತ್ರಸ್ಥ ಕಾರ್ಮಿಕರಿಗೆ ಅಂತಿಮ ಪರಿಹಾರ ನೀಡುವ ಕುರಿತು

950 (976) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ಜವಳಿ, ಯುವಜನ ಸೇವೆ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹದೇವ ಜವಳಿ ಗಿರಣಿಯ ಸಂತ್ರಸ್ಥ ಕಾರ್ಮಿಕರಿಗೆ ಅಂತಿಮ ಪರಿಹಾರ ನೀಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಇದ್ದಲ್ಲಿ, ಯಾವ ರೀತಿಯ ಪರಿಹಾರ ಕ್ರಮವನ್ನು ಕೈಗೊಳ್ಳ ಲಾಗುವುದು?

ಇ) ಕಾರ್ಮಿಕರಿಗೆ ಪರಿಹಾರ ನೀಡುವಲ್ಲಿ ವಿಳಂಬಕ್ಕೆ ಕಾರಣಗಳೇನು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ ಯುವಜನಸೇವೆ ಹಾಗೂ ಕ್ರೀಡಾ ಸಚಿವರು) :

ಅ) ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ ಮಿಲ್ ಲಿ., (ಮಹದೇವ ಜವಳಿ ಗಿರಣಿ) ಹುಬ್ಬಳ್ಳಿ ಕಂಪೆನಿಯು ಸೆಕ್ಷನ್ 449 (ಕಂಪೆನಿ ಕಾಯ್ದೆ 1959ರ ಪ್ರಕಾರ ಉಚ್ಚ ನ್ಯಾಯಾಲಯವು ದಿನಾಂಕ: 15–10–2004ರಲ್ಲಿ ಸಮಾಪನಾಧಿಕಾರಿಯಾಗಿ ಶ್ರೀ 'ರಮಾಕಾಂತ ಅಫೀಷಿಯಲ್ ಲಿಕ್ವಿಡೇಟರ್, ರವರನ್ನು ನೇಮಕ ಮಾಡಿರುತ್ತಾರೆ. ದಿ: 15–10–2004 ರಿಂದ ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ ಮಿಲ್ ಲಿ.,ನ ಚರ ಮತ್ತು ಸ್ಥಿರ ಆಸ್ತಿಗಳ ಸಮಾಪನಾಧಿಕಾರಿಯವರ ಮೇಲ್ವಿಚಾರಣೆಯಲ್ಲಿರುತ್ತದೆ. ಕಂಪೆನಿ ಕಾಯ್ದೆ 449ರ ಪ್ರಕಾರ ಯಾವುದೇ ಕಾರ್ಮಿಕರಿಗೆ ಪರಿಹಾರವನ್ನು ಅಫೀಷಿಯಲ್ ಲಿಕ್ವಿಡೇಟರ್‌ರವರು ಇತ್ಯರ್ಥಪಡಿಸಬೇಕಿರುತ್ತದೆ. ಹಾಗೂ ಸದರಿ ಕಂಪೆನಿಯ ಸಮಾಪನಾಧಿಕಾರಿಯವರ ಮೇಲ್ವಿಚಾರಣೆಯಲ್ಲಿರುವುದರಿಂದ ಯಾವುದೇ ನಿರ್ಣಯವನ್ನು ಸಮಾಪನಾಧಿಕಾರಿಯವರೇ ಕೈಗೊಳ್ಳಬೇಕಿರುತ್ತದೆ.

ಆ) ಅನ್ವಯಿಸುವುದಿಲ್ಲ.

ಇ) ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ ಮಿಲ್ ಲಿ., (ಮಹದೇವ ಜವಳಿ ಗಿರಣಿ) ರವರ ಸಮಾಜ ಕಾರ್ಮಿಕರಿಗೆ ದೊರೆಯಬೇಕಾಗಿರುವ ಸವಲತ್ತುಗಳ ಬಗ್ಗೆ ಅಫೀಷಿಯಲ್ ಲಿಕ್ವಿಡೇಟರ್‌ರವರೇ ತೀರ್ಮಾನಿಸಬೇಕಿರುತ್ತದೆ. ಸರ್ಕಾರದ ವತಿಯಿಂದ ಏನೂ ಕ್ರಮ ಜರುಗಿಸಲು ಬರುವುದಿಲ್ಲ. ಒಮ್ಮೆ ಕ್ರಮ ಜರುಗಿಸಿದಲ್ಲಿ ಸಬ್‌ಜುಡಿಸ್ (Subjudice) ಆಗುತ್ತದೆ.

790 ಹಾಸಿಗೆ (ಬೆಡ್)ಯಿಂದ 1200 ಬೆಡ್‌ಗೆ ಏರಿಸುವ ಕುರಿತು

951 (977) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ ಧಾರವಾಡ ಪೂರ್ವ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿಮ್ಸ್‌ನಲ್ಲಿ ಹಾಸಿಗೆ (ಬೆಡ್) 790 ರಿಂದ 1200ಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;